ಬೆಂಗಳೂರು ನಗರದಲ್ಲಿ ಅದಕ್ಕಾಗಿ ರಚಿಸಲಾದ ಕಮಿಟಿಯ ಮುಂದೆ ಪೆಂಡಿಂಗ್ ಇವೆ. ಆ ಕಮಿಟಿ ಏ ನಿರ್ಣಯ ಮಾಡುತ್ತದೆಯೋ ಅದರನ್ವಯ ಅರ್ಜಿಗಳ ವಿಲೇವಾರಿಯಾಗುತ್ತದೆ. ಆ ಬಗ್ಗೆ ಕಮಿಟ ಅಧಿಕಾರ ಕೊಟ್ಟಿದೆ. ಅದರ ಪ್ರಕಾರ ಅರ್ಜಿ ವಿಲೇವಾರಿ ನಡೆಯುತ್ತದೆ. ಒಂದು ವೇಳೆ ಆ ಕಾನೂ ಇಲ್ಲದಿದ್ದರೆ ಸರ್ಕಾರಿ ಜಮೀನಿನಲ್ಲಿ ಯಾರು ಮನೆಗಳನ್ನು ಕಟ್ಟಿಸಿದ್ದರೋ ಅವುಗಳನ್ನೆಲ್ಲಾ ಮುಟ್ಟುಗೋ ಹಾಕಿಕೊಳ್ಳುತ್ತಿದ್ದೆವು. ಅದಕ್ಕೆ ನಾವು ಒಂದು ಡೇಟ್ ಫಿಕ್ಸ್ ಮಾಡಿದ್ದೆವು. ಇಂತಿಷ್ಟು ತಾರೀಖಿ ಒಳಗೊಳಗಾಗಿ ಯಾರಾದರೂ ಅರ್ಜಿಗಳನ್ನು ಹಾಕದಿದ್ದಲ್ಲಿ, ಆ ತಾರೀಖಿನ ನಂತರ ಯಾರಾದರ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದರೆ ಅವುಗಳನ್ನೆಲ್ಲಾ ಮುಟ್ಟುಗೋಲು ಹಾ ನಾವು ಸರ್ಕಾರಕ್ಕೆ ತೆಗೆದುಕೊಳ್ಳುತ್ತೇವೆ. ಅವರು ಎಷ್ಟೇ ದೊಡ್ಡವರಾಗಿದ್ದರೂ ನಾನು ಅವರ ಮೇ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಬಚ್ಚೇಗೌಡರು ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಸ್ತಾಪಿಸಿದ್ದ ವಿಷಯವೊಂದಕ್ಕೆ ಸಂಬಂಧಿಸಿದಂತೆ ಒಂದು ಹೇಳಿಕೆಯನ್ನು ನೀಡುತ್ತಾರೆ.

ಚಾಮರಾಜನಗರದ ಕುಡಿಯುವ ನೀರಿನ ಯೋಜನೆಗೆ ಹೆಚ್ಚಿನ ಹಣ ನೀಡುವುದರ ಬ

+ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾ ಹಿರಿಯ ಸದಸ್ಯರಾದ ವಾಟಾಳ ನಾಗರಾಜರವರು ಇವತ್ತು ಈ ಚಾಮರಾಜನಗರ ಕುಡಿಯುವ ನೀರಿ ಬಗ್ಗೆ ಹೆಚ್ಚುವರಿ ಹಣವನ್ನು ಕೊಡುವ ಬಗ್ಗೆ ಈಗಾಗಲೇ ಸರ್ಕಾರವನ್ನು ಕೇಳಿದ್ದಾರೆ. ಇದರ ಬ ರಾಜ್ಯದಲ್ಲಿ 1990ರಲ್ಲಿ ಸುಮಾರು 16 ನೀರು ಸರಬರಾಜು ಯೋಜನೆಗಳಿಗೆ ಹೆಚ್ಚುವರಿ ಹಣವನ್ನು ಕೊಳವೆಗಳನ್ನು ಅಳವಡಿಸಲು ಪೈಪ್‌ಲೈನ್ ಹಾಕುವುದಕ್ಕೆ ಟೆಂಡರ್‌ಗಳನ್ನು ಕರೆದು ಆ ಟೆಂಡರ ಮೂಲಕ ಏಜೆನ್ಸೀಗಳನ್ನು ಮಾಡಿ ಆ ಕಾರ್ಯವನ್ನು ಒಪ್ಪಿಸಲಾಗಿತ್ತು. ಅದರಲ್ಲಿ ತಡ ಆಗಿದ್ದರಿಂದ ಮತ ನಾನಾ ಕಾರಣಗಳಿಂದ ಆ ಕಂಟ್ರಾಕ್ಟರ್‌ಗಳು ಹೆಚ್ಚು ಹಣವನ್ನು ಕೊಡಬೇಕು, ಎಸ್ಕಲೇಷನ್ ಪ್ರೈಸ್ ಎಂದಿದ್ದರಿಂದ, ಈಗ ಮುಖ್ಯಮಂತ್ರಿಗಳಾಗಿರುವವರು ಆಗ ಉಪ ಮುಖ್ಯಮಂತ್ರಿಗಳಾಗಿದ್ದಾ ಚಿಕ್ಕಣ್ಣಯ್ಯಪ್ಪನವರ ಒಂದು ಸಮಿತಿಯನ್ನು ನೇಮಕ ಮಾಡಿದಾಗ, ಈ ಎಲ್ಲಾ ಯೋಜನೆಗಳಿಗೆ ಒಂದ ಸಾರಿ, ಒಂದು ಟೈಮ್ ಎಸ್ಕಲೇಷನ್ ಕೇಳಿದ್ದಾರೆ, ಆದ್ದರಿಂದ ಕೊಡಬೇಕು, ಇಲ್ಲದಿದ್ದರೆ ಕೆಲ ಸ್ಥಗಿತವಾಗುತ್ತದೆ ಅಥವಾ ತಡವಾಗುತ್ತದೆ ಎನ್ನುವ ದೃಷ್ಟಿಯಿಂದ ಅವರು ಒಂದು ರಿಪೋರ್ಟ್ ಅನ ಕೊಟ್ಟರು. ಈಗಾಗಲೇ ಅದರ ಬಗ್ಗೆ ಸಾಕಷ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನದಲ ಪ್ರಸ್ತಾಪ ಮಾಡಿದರು ಮತ್ತು ಇತರ ಶಾಸಕರು ಅವರವರ ಕ್ಷೇತ್ರಗಳಲ್ಲಿ ಕೆಲಸ ತಡವಾಗುತ್ತಿದೆ ವಿಳಂಬವಾಗಿದೆ, ಕಂಟ್ರಾಕ್ಟರ್ಸ್ ಪೈಪ್‌ಲೈನ್ ಕೆಲಸ ಮಾಡುತ್ತಿಲ್ಲ ಎಂದು ತಿಳಿಸಿದ್ದರ ಮೇರೆಗೆ, ಮು ವಿಶೇಷವಾಗಿ 2-3 ಮೀಟಿಂಗ್‌ಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು, ಅದರ ಬಗ್ಗೆ ಮೊನ್ನೆ ತಾನೆ ಸಚಿವ ಸಂಪುಟದ ತೀರ್ಮಾನ ಆಗಿ ರಾಜ್ಯದಲ್ಲಿ 11 ಕುಡಿಯುವ ನೀರಿನ ಯೋಜನೆಗಳಿಗೆ ಒಂದ ಸಾರಿ, ಹೆಚ್ಚುವರಿ ಹಣ, ಎಸ್ಕಲೇಷನ್ ಅನ್ನು ಕಂಟ್ರಾಕ್ಟರ್‌ಗಳಿಗೆ ಕೊಡಬೇಕು ಎಂದು ತಿಳಿಸಿ, 1 ತಿಂಗಳುಗಳಲ್ಲಿ ಆ ಕೆಲಸಗಳನ್ನು ಆದಷ್ಟು ಬೇಗನೆ ಮುಗಿಸಿಕೊಡಬೇಕು ಎಂಬ ಕಂಡೀಷನ್ ಹಾಕಿ ಮತ್ತು ಟಾರ್ಗೆಟ್ ಇಟ್ಟು ಈ ಕೆಲಸ ಕಾರ್ಯಗಳನ್ನು ಮುಗಿಸಬೇಕು ಎನ್ನುವ ದೃಷ್ಟಿಯಿಂದ 532.9

ಲಕ್ಷ ರೂ.ಗಳನ್ನು ಮಂಜೂರಾತಿ ಕೊಟ್ಟಿದೆ. ಅದರಲ್ಲಿ ಚಾಮರಾಜನಗರಕ್ಕೆ ಎರಡು ಹಂತ. ಮೊದಲನೆಯ ಹಂತದಲ್ಲಿ ಒಂದು ರೀಚ್ 27.48 ಕಿ.ಮೀ. ಎರಡನೆಯ ರೀಚ್ 18.60 ಕಿ.ಮೀ., ಒಟ್ಟು 42 ಕಿ.ಮೀ.ದಲ್ಲಿ 990ರಿಂದ ಇದುವರೆಗೂ ಆಗಿರತಕ್ಕ ಕೆಲಸ ಕೇವಲ 6 ಕಿ.ಮೀ. ಮಾತ್ರ. ಈ ನೀರನ್ನು ಎಲ್ಲಿಂದ ತರುವಂಥಾದ್ದು ಎಂದರೆ, ಟಿ. ನರಸೀಪುರದಿಂದ ಕಾವೇರಿ ನದಿ ನೀರು ತರುವಂತಹ ಯೋಜನೆ ಇದು. ಈ ಹಿಂದೆ ಅಲ್ಲೇ ನೀರನ್ನು ಕೊಡುವಂತಹ ಒಂದು ಕಾರ್ಯ ಚಾಮರಾಜನಗರಕ್ಕೆ ಕೊಟ್ಟಿರುವಂಥಾದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅಲ್ಲ ಹಿಂದೆ ಸುವರ್ಣ ತೀರ್ಥ ನದಿಯಿಂದ ನೀರು ಕೊಟ್ಟಂತಹದ್ದು ನಿಮಗೆ ಗೊತ್ತಿದೆ. 47 ಕಿ.ಮೀ.ಗಳ ದೂರದಿಂದ ಕಾವೇರಿ ನದಿ ನೀರನ್ನು ತರುವಂತಹ ಈ ಯೋಜನೆಯ ಅಂದಾಜು ವೆಚ್ಚ ಹಿಂದೆ 615 ಲಕ್ಷ ರೂ. ಗಳಾಗಿತ್ತು. ಇವತ್ತು ಅದು 9 ಕೋಟಿ ರೂ.ಗಳಿಗೆ ಆ ವೆಚ್ಚ ಏರಿದೆ.

ಪೈಪ್‌ಲೈನ್ ಅಳವಡಿಸಿಕೊಂಡು ಚಾಮರಾಜ ನಗರಕ್ಕೆ ಒಂದು ಮತ್ತು ಎರಡನೆ ಹಂತಕ್ಕೆ 34 ಲಕ್ಷ ಮತ್ತು 27 ಲಕ್ಷ 45,000 ಒಟ್ಟು 62 ಲಕ್ಷ ಅತಿ ಹೆಚ್ಚು ಹಣವನ್ನು ಇವತ್ತು ತಮಗೆ ಬೇಗ ಕೆಲಸ ಮುಗಿಸಿಕೊಡುವಂತಹ ಕಾರ್ಯಕ್ಕೆ ಕೊಟ್ಟಿರತಕ್ಕಂಥದ್ದು. ಆ ಕಾರ್ಯವನ್ನು ಮಾನ್ಯ ಶಾಸಕರಿಗೆ ಇರುವಂಥಾದ್ದು ಬಹಳ ಬೇಗ ಮುಗಿಸಿಕೊಡಬೇಕು. ಆ ಬ್ಯಾಲೆನ್ಸ್ ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಡಬೇಕೆಂದು ಕೇಳಿದ್ದಾರೆ, ಸುಮಾರು ಎಂಟು ಕೋಟಿಯಷ್ಟು ಉಳಿದ ಕೆಲಸ ಈಗ ಆಗಬೇಕಾಗಿದೆ. ಈಗ ಆಗಿರತಕ್ಕಂತಹ ಕೆಲಸ ಬರೀ 126 ಲಕ್ಷದ ಕೆಲಸ ಆಗಿದೆ. ಇದರ ಬಗ್ಗೆ ತಮಗೆ ಗೊತ್ತಿದೆ, ಡೆಡ್ ವರ್ಕ್ಸ್ ಆಗಿರತಕ್ಕಂಥದ್ದು ಮತ್ತು ಓವರ್ ಹೆಡ್ ಟ್ಯಾಂಕ್ಸ್ ಕಟ್ಟಿರುವದು, ಪ್ರೋಗ್ರೆಸ್ ಅದರ ಜೊತೆಗೆ ಲ್ಯಾಂಡ್ ಅಕ್ವಿಸಿಷನ್ ಮತ್ತು ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡಿ 126 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಈ ಕಾರ್ಯವನ್ನು ಮುಗಿಸಿಕೊಡುವುದು ಎಂದರೆ 97-98, 98-99, 98ರ ಅಂತಿಮದಲ್ಲಿ ಆಗುವ ಅಷ್ಟಕ್ಕೆ ಎರಡು ವರ್ಷದಲ್ಲಿ ಸುಮಾರು ಮೂರು ಮೂರೂವರೆ, ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. 1999ರ ಅಂಚಿಗೆ ಇದನ್ನು ಎರಡು ವರ್ಷದಲ್ಲಿ ಮುಗಿಸಿಕೊಡುತ್ತೇವೆ. ಎಂದು ತಿಳಿಸಿ, ಅಥವಾ ಅತಿ ಹೆಚ್ಚು ಅಂದರೆ ಎರಡೂವರೆ ವರ್ಷದಲ್ಲಿ ಈ ಕಾರ್ಯವನ್ನು ಆದಷ್ಟು ಬೇಗ ಮುಗಿಸಿಕೊಡುವಂತಹ ಕಾರ್ಯವನ್ನು ಮಾಡಿಕೊಡುತ್ತೇವೆ. ಬಡ್ಜೆಟ್‌ನಲ್ಲಿ ಅದಕ್ಕೆ ಅಲೋಕೇಷನ್ ಮಾಡಿಕೊಂಡು ಆದಷ್ಟು ಬೇಗ ಆ ಕೆಲಸ ಮುಗಿಸಿ ಕೊಟ್ಟು ಪೈಪ್‌ಲೈನ್ ಕೆಲಸ ಮೇಜರ್ ವರ್ಕ್ ಇದೆ, ಅದನ್ನು ಪೈಪ್‌ಲೈನ್ ಮಾಡಿಸಿ ಕೊಡುತ್ತವೆಂದು ಹೇಳಿ, ಮಾನ್ಯ ಉಪಾಧ್ಯಕ್ಷರ ತಮ್ಮ ಮೂಲಕ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರಿಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಸ್ವಲ್ಪ ಅರ್ಥವಾಗಿಲ್ಲ. ಒಂದನೇ ಹಂತ ಎರಡನೇ ಹಂತ ಎಂದು ಹೇಳಿದಿರಿ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಒಟ್ಟು ಏನಾದರೂ ಮಾಡಿ ನೀರನ್ನು ಚಾಮರಾಜ ನಗರಕ್ಕೆ, ರಾಮಸಮುದ್ರ ಪಟ್ಟಣಗಳಿಗೆ ಯಾವಾಗ ಕೊಡುತ್ತೀರಿ ಅಷ್ಟು ಹೇಳಿ. ನಿರ್ದಿಷ್ಟವಾಗಿ ವಿರೇಂದ್ರ ಪಾಟೀಲರು ಅದನ್ನು ಶಂಕು ಸ್ಥಾಪನೆ ಮಾಡಿ ಆರು ವರ್ಷಗಳಾಯಿತು. ತಾವು ಪ್ರಯತ್ನ ಪಟ್ಟಿದ್ದೀರಿ, ನಿಮ್ಮ ಬಗ್ಗೆ ಅಪಾರವಾದ ಗೌರವ ಇದೆ, ಅಭಿಮಾನ ಇದೆ. ಈಗ ನಿಖರವಾಗಿ ಇಂತಹ ತಾರೀಖಿನ ಒಳಗೆ ಚಾಮರಾಜನಗರಕ್ಕೆ ಶತಾಯಗತಾಯ ನೀವು ಕೊಡುತ್ತೇವೆಂದು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಚಾಮರಾಜ ನಗರಕ್ಕೆ 199 ಡಿಸೆಂಬರ್ ಒಳಗೆ ಕೊಡುತ್ತೇವೆ. ಈಗ 1997-98.

ಉಪಾಧ್ಯಕ್ಷರು : ತಾವು ನಿರ್ದಿಷ್ಟವಾಗಿ ಹೇಳಿ ಎಂದು ಹೇಳಿದಿರಿ. ನಿರ್ದಿಷ್ಟವಾಗಿ ಹೇಳಿದ್ದಾರೆ. ತಾವು ದಯಮಾಡಿ ಕುಳಿತು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಎಲೆಕ್ಷನ್ ಮುಗಿದು ಹೋಗಿರುತ್ತದೆ. ಆಗ ಕೊಟ್ಟರೆ ಏನು ಬಂತು ?

ಉಪಸಭಾಧ್ಯಕ್ಷರು : ನಿಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಒಂದು ವರ್ಷಕ್ಕೆ ಆಗುವಷ್ಟು ಕೆಲಸ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಎಲೆಕ್ಷನ್‌ಗೆ ನೀರು ಬೇಕು ಜನರಿಗೆ ಅಲ್ಲ.

ಶ್ರೀ ವಾಟಾಳ ನಾಗರಾಜ : ಎಲ್ಲರ ಆಕಾಂಕ್ಷೆ ಎಲ್ಲರ ಹೋರಾಟ ಇದೆ. ಅಂತಿಮವಾಗಿದೆ. ಆದ್ದರಿಂದ ನಾನು ಸತ್ಯ ಹೇಳುತ್ತಿದ್ದೇನೆ, ಇವರೆಲ್ಲಾ ಸುಮ್ಮನೆ ಕುಳಿತಿದ್ದಾರೆ. ಈ ಸದನದಲ್ಲಿ ನಾನು ಜೆ.ಹೆಚ್. ಪಟೇಲರು ಇಬ್ಬರೇ ಸತ್ಯ ಹೇಳುವುದು.

ಶ್ರೀ. ಬಿ.ಎನ್.ಬಚ್ಚೇಗೌಡ : ಮುಂದಿನ ಅಸೆಂಬ್ಲಿ ಚುನಾವಣೆ ಮೊದಲು ಆ ಕಾರ್ಯ ಮಾಡಿಕೊಡುತ್ತೇವೆ. ಚುನಾವಣೆಗೆ ಮುಂಚೆ ಮಾಡುತ್ತೇವೆ.

ಉಪಸಭಾಧ್ಯಕ್ಷರು : ನಿಮಗೆ ಆದಷ್ಟು ಬೇಗ ನೀರು ಕೊಡಿಸುತ್ತಾರೆ, ನೀವು ಏನು ಕಾಳಜಿ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ಬಚ್ಚೇಗೌಡರೆ, ನಿಮ್ಮ ಬಗ್ಗೆ ನನಗೆ ನಂಬಿಕೆ ಇದೆ. ನಿಮ್ಮ ಅಧಿಕಾರಿಗಳು ಶ್ರದ್ಧೆ ವಹಿಸಿ ಕೆಲಸ ಮಾಡಿದ್ದಾರೆ, ನಿಮ್ಮ ಅಧಿಕಾರಿಗಳ ಬಗ್ಗೆ ನನಗೆ ನಂಬಿಕೆ ಇದೆ, ಈ ಬಗ್ಗೆ ನಾವು ಹತ್ತಾರು ಸಭೆಗಳನ್ನು ಮಾಡಿದ್ದೇವೆ, ಮುಖ್ಯಮಂತ್ರಿಗಳು ಇದಕ್ಕೆ ಬಹಳ ಕಾರಣಕರ್ತರಾಗಿದ್ದಾರೆ. ಅವರಿಗು ನಾನು ಅಭಿನಂದನೆ ಸಲ್ಲಿಸಬೇಕು. ಮುಖ್ಯಮಂತ್ರಿಗಳು ತಮ್ಮನ್ನು ನಮ್ಮನ್ನು ಕರೆದರು, ಶಿವಮೊಗ್ಗ ಈಶ್ವರಪ್ಪನವರನ್ನು ಕರೆದರು, ಎಲ್ಲಾ ಮಾಡಿದ್ದಾರೆ, ನನಗೆ ಏನು ಭಯ ಎಂದರೆ ನೀವು ಎಷ್ಟು ಬೇಗ ನಮಗೆ ನೀರು ಕೊಟ್ಟರೆ ಅಷ್ಟು ಒಳ್ಳೆಯದು. ಜನರಿಗೆ ಅಪನಂಬಿಕೆ ಬಂದು ಬಿಟ್ಟಿದೆ. ಆರು ಕಿ.ಮೀ. ಪೈಪ್ ಹಾಕಿದ್ದೀರಿ. ಮುಂದಕ್ಕೆ ನೀವು 36 ಕಿ.ಮೀ.ಪೈಪ್ ಹಾಕಿಲ್ಲ ಎನ್ನತಕ್ಕಂತಹ ಒಂದು ಅಪನಂಬಿಕೆ ಬಂದಿದೆ. ಅಪನಂಬಿಕೆಯನ್ನು ಹೋಗಲಾಡಿಸತಕ್ಕಂಥದ್ದು ತಾವು ಬೇಗ ನೀವು ಹೇಳಿದ ಪ್ರಕಾರ 1998ರ ಕೊನೆಯಲ್ಲಿ.....

ಶ್ರೀ ಬಿ. ಎನ್. ಬಚ್ಚೇಗೌಡ : 1997-98 ಇದೆ, 1998-99, ಮಿಡ್ಲ ಆಫ 1999 ಕೊಡುತ್ತೇವೆ. ಬಹಳ ಮೇಜರ್ ವರ್ಕ್ ಇದೆ, ನಾಲ್ಕು, ನಾಲ್ಕೂವರೆ ಕೋಟಿ ಒಂದು ವರ್ಷಕ್ಕೆ ಖರ್ಚು ಮಾಡಬೇಕು. 1999ರ ಮಧ್ಯದಲ್ಲಿ ಕೊಡುತ್ತೇವೆ. ಚುನಾವಣೆಗೆ ಮೊದಲು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲರೂ ಮಾತನಾಡುವುದಕ್ಕೆ ಯಾವುದಾದರೂ ಒಂದು ಉದ್ದೇಶ ಇರುತ್ತದೆ. ಜನರಿಗೆ ಒಳ್ಳೆಯದಾಗಬೇಕು. ಆ ಒಳ್ಳೆಯದು ಮಾಡತಕ್ಕಂಥದ್ದರ ಬಗ್ಗೆ ಇರಬೇಕು. ಜನರು ಮಾತನಾಡುವ ಈ ಉದ್ದೇಶ ತಮಗೆ ಹೇಳುತ್ತಿದ್ದೇನೆ. ತಾವು ಮಾಡುತ್ತೀರಿ ಎನ್ನತಕ್ಕಂತಹ ಭರವಸೆ ನನಗೆ ಇದೆ. ನಿಮ್ಮ ಅಧಿಕಾರಿಗಳ ಬಗ್ಗೆ ಬಹಳ ಗೌರವ ಇದೆ. ಗೋವಿಂದರಾಜ್ ಮತ್ತು ರೆಡ್ಡಿಯವರು ಬಹಳ ಪ್ರಯತ್ನ ಪಟ್ಟರು. ಇವರೆಲ್ಲಾ ಪ್ರಯತ್ನ ಪಟ್ಟಿದ್ದಾರೆ. ನಾನು ಎಲ್ಲರಿಗೂ ಅಭಿನಂದಿಸುತ್ತೇನೆ. ನೀವು ದಯವಿಟ್ಟು ನನಗೆ ಕರಾರುವಕ್ಕಾಗಿ ಹೇಳಿ ಯಾವುದು ಏನಾದರೂ ಆಗಲಿ, ನೀವು ಚಾಮರಾಜನಗಕ್ಕೆ ಲಿತಿ ಶೀಫ್ರ ಅಂದರೆ 1998ರ ಕೊನೆ ಅಥವಾ 1999ರ ಮೊದಲು ನೀರು ಕೊಡಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ : ಬೈ ಮಿಡ್ಲ್ ಆಫ್ 1999ನಲ್ಲಿ ಕುಡಿಯುವ ನೀರು ಅವರಿಗೆ ಕೊಡುವ ಕೆಲಸ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : 1990ನೇ ಇಸವಿಯಲ್ಲಿ ಆರಂಭ ಆದ ಶಿವಮೊಗ್ಗ ಕುಡಿಯುವ ನೀರಿನ ಯೋಜನೆಗೆ ಸನ್ಮಾನ್ಯ ಬಚ್ಚೇಗೌಡರ ಕಾಲದಲ್ಲಿ, ಜೆ.ಹೆಚ್. ಪಟೇಲರು ಬಂದ ಕಾಲದಲ್ಲಿ ಕ್ಯಾಬಿನೆಟ್ ಅಪ್ರೂವಲ್ ಮಾಡಿಕೊಟ್ಟಿದ್ದಾರೆ. ನಿಜಕ್ಕೂ ಈ ಸರ್ಕಾರಕ್ಕೆ ಶಿವಮೊಗ್ಗ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಈಶ್ವರಪ್ಪನವರ ಪ್ರಶ್ನೆಗೆ ಉತ್ತರ ಹೇಳುತ್ತೇನೆ ಅವರೂ ಎಸ್ಕಲೇಷನ್ ಮೊನ್ನೆ ಕೇಳಿದ್ದಾರೆ, ಅದಕ್ಕೆ 46,40,000 ರೂ.ಗಳು ಮಂಜೂರು ಆಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ಯೋಜನೆ ಇದ್ದದ್ದು 12 ಕೋಟಿ ರೂಪಾಯಿ ಮಾತ್ರ ಅದನ್ನು ಯಾವಾಗ ಮಾಡುತ್ತೀರಿ, ಯಾವಾಗ ಮುಗಿಸುತ್ತೀರಿ.

ಶ್ರೀ ಕೆ.ಎನ್. ನಾಗೇಗೌಡ : ನಿಯಮ 69ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದಾರೆ. ಇದು ಅಜೆಂಡಾದಲ್ಲಿ ಇದೆ.

(ಗೊಂದಲ)

ಉಪ-ಸಭಾಧ್ಯಕ್ಷರು : ವಿಷಯ ಪಟ್ಟಿ ಪ್ರಕಾರ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ ಮೇಲೆ ತಮ್ಮ ವಿಷಯ ಬರುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ. ಶಿವರಾಮೇಗೌಡರು ಮಾತನಾಡಿದ ಮೇಲೆ ತಮ್ಮ ವಿಷಯ ಬರುತ್ತದೆ.

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಭಾಷಣ

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಉಪ ಸಭಾಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ಬೆಂಬಲಿಸಿ ನನ್ನ ಸಲಹೆಗಳನ್ನು ಸರ್ಕಾರಕ್ಕೆ ಕೊಡಲು ಇಚ್ಛೆ ಪಡುತ್ತೇನೆ. ಕಳೆದ 28 ತಿಂಗಳಿನಿಂದ ಸರ್ಕಾರ ನಡೆಸಿದ ಮೇಲೆ ಜನ ಈ ಸರ್ಕಾರ ಸರಿಯಾಗಿ ನಡೆಯುತ್ತಿದೆ ಎಂದು